ಆಷಾಡ ತಿಂಗಳಿನ ಮೂರನೆಯ ಶನಿವಾರ. ತಣ್ಣನೆ ಬೀಸುತ್ತಿರುವ ಗಾಳಿ. ಜಿಟಿ ಜಿಟಿ ಸುರಿಯುತ್ತಿದ್ದ ಮಳೆ. ಬೆಂಗಳೂರಿನ ವಿನಾಯಕ ಲೇಔಟಿನಲ್ಲಿ ಗಂಟೆ ಎಂಟಾಗುತ್ತಿದ್ದಂತೆ ಜನರೆಲ್ಲ ಮನೆಯ ಒಳಗೆ ಸೇರಿಕೊಂಡಿದ್ದರೂ, ಲೇಔಟಿನ ತುದಿಯಲ್ಲಿದ್ದ ಹೊಸದಾಗಿ ಕಟ್ಟಿಸಿದ್ದ ಮನೆ 'ಮಂಗಳ' ಮಾತ್ರ ಕೆಂಪು, ನೀಲಿ, ಬಿಳಿ ಹಳದಿ ಬಣ್ಣದ ಚಿಕ್ಕ ಚಿಕ್ಕ ದೀಪಗಳಿಂದ ಕಂಗೊಳಿಸುತ್ತಿತ್ತು. ಮನೆಯ ಹೊರಗೆ ಹಸಿ ಮಡಲಿನ ಚಪ್ಪರವಿದ್ದರೆ, ಒಳಗೆ ಭಟ್ಟರು 'ವಾಸ್ತು' ಹೋಮದ ತಯಾರಿಯಲ್ಲಿದ್ದರು. ಮನೆಯ ಯಜಮಾನಿ ಸುಮಂಗಲಾಳ ಮುಖದಲ್ಲಿ ಸಂತೋಷ, ದುಃಖಗಳ ಸಮ್ಮಿಶ್ರಣ. ಅಂತೂ ಇಂತೂ ಸ್ವಂತ ಮನೆಯ ಯಜಮಾನಿಯಾದ ಸಂತೋಷ ಒಂದು ಕಡೆಯಾದರೆ, ತನ್ನ ಕಿಟ್ಟಿ ಗ್ರೂಪಿನ ಸ್ನೇಹಿತೆಯರಿಗೆಲ್ಲ ಮೂರಂತಸ್ತಿನ ಮನೆಯಿದ್ದರೆ, ತನ್ನದು ಮಾತ್ರ ಎರಡಂತಸ್ತಿನ ಮನೆಯಾಯಿತಲ್ಲ ಎಂಬ ಬೇಜಾರು.

ಜರಿ ಪಂಚೆ, ಶಲ್ಯದಲ್ಲಿದ್ದ ಮನೆಯ ಯಜಮಾನ 'ವಾಸು'ವಿಗೆ ಇನ್ನಿಲ್ಲದ ಚಿಂತೆಗಳು ಕಾಡುತ್ತಿದ್ದು ಮುಖದಲ್ಲಿ ಚಿಂತೆಯ ಗೆರೆಗಳನ್ನು ಯಾರು ಬೇಕಾದರೂ ಎಣಿಸಬಹುದಿತ್ತು. ಹೊಸ ಮನೆ 'ಮಂಗಳ' ದ ಗ್ರಹಪ್ರವೇಶ, ವಾಸ್ತುಹೋಮ ಎರಡು ಸಲ ಮುಂದೂಡಲ್ಪಟ್ಟಿದ್ದು, ಮನೆ ಮುಗಿದು ನಾಲ್ಕು ತಿಂಗಳಾದರೂ ಬಾಡಿಗೆ ಮನೆಯಲ್ಲಿದ್ದುಕೊಂಡು ತಿಂಗಳಿಗೆ ರುಪಾಯಿ 15,000 ಸಾವಿರ ಬಾಡಿಗೆ ಕೊಡಬೇಕಾಯಿತು. 'ಯಾಕಪ್ಪ ಹೋಗಿ ಹೋಗಿ ಆಷಾಡದಲ್ಲೇಕೆ ಗೃಹಪ್ರವೇಶ? ಇನ್ನೊಂದು ತಿಂಗಳು ಕಳೆದೇ ಗೃಹಪ್ರವೇಶ ಮಾಡಬಹುದಿತ್ತು' ಎಂದು ಪರಿವಾರದವರು ಎಷ್ಟು ಹೇಳಿದರೂ ಕೇಳದೆ ಹೊಸ ಮನೆಗೆ ಬೀಗ ಹಾಕಿಟ್ಟು ಬಾಡಿಗೆ ಮನೆಯಲ್ಲಿರ ಬೇಕಾದ ಪರಿಸ್ಥಿತಿ ವಾಸುವನ್ನು ಆಷಾಡ, ಗೀಷಾಡ ಒಂದೂ ನೋಡದೆ ಗೃಹಪ್ರವೇಶ ಇಟ್ಟುಕೊಳ್ಳುವ ಪರಿಸ್ಥಿತಿ ಬಂತು.

ಮೊದಲ ಸಲ ಗ್ರಹ ಪ್ರವೇಶಕ್ಕೆ ಪಂಚಾಂಗ, ಜಾತಕ ಎಲ್ಲಾ ಕೂಡಿ ಕಳೆದು ಶುಭ ಮುಹೂರ್ತವಿಟ್ಟರೆ ಗ್ರಹ ಪ್ರವೇಶಕ್ಕೆ ಸರಿಯಾಗಿ ಹದಿನೈದು ದಿನ ಮೊದಲು ಆಟ ಆಡಲು ಹೋದ ದೊಡ್ಡ ಮಗ ಸೈಕಲಿನಿಂದ ಬಿದ್ದು ಕಾಲು ಮುರಿದುಕೊಂಡಾಗ, ಗಾಬರಿಗೊಂಡ ಮನೆಯವರ ಇಚ್ಛೆಯಂತೆ ಗೃಹಪ್ರವೇಶ ಎರಡು ತಿಂಗಳು ಮುಂದೂಡಲ್ಪಟ್ಟಿತು. ಎರಡನೆ ಸಲದ ಗೃಹ ಪ್ರವೇಶದ ದಿನವೂ ಒಳ್ಳೆಯ ಗಳಿಗೆ ನೋಡಿಯೇ ದಿನವಿಟ್ಟರು. ಆದರೆ ಗೃಹಪ್ರವೇಶಕ್ಕೆ ಎರಡು ದಿನವಿರುವಾಗ ಕುಟುಂಬದ ಅಜ್ಜಿಯೊಂದು ಸತ್ತು ಗೃಹ ಪ್ರವೇಶ ಮುಂದೂಡಲ್ಪಟ್ಟಿತು. ಗೃಹಪ್ರವೇಶದ ಹೆಸರು ಕೇಳಿದರೇ ಗಡಗಡ ನಡಗುವಂತಾದಾಗ ವಾಸು ಧೈರ್ಯ ತಂದುಕೊಂಡು 'ಇನ್ನು ಯಾವ ಜಾತಕ, ಮುಹೂರ್ತ ನೋಡುವುದು ಬೇಡ, ಆಷಾಡವಾದರೆ ಆಗಲಿ, ಬರುವವರು ಬರಲಿ, ಬಿಡಲಿ, ಇನ್ನು ಹದಿನೈದು ದಿವಸಕ್ಕೆ ಗೃಹ ಪ್ರವೇಶ ಮಾಡಿಯೇ ಸಿದ್ದ' ಎನ್ನುವ ತೀರ್ಮಾನ ತೆಗೆದುಕೊಂಡುಬಿಟ್ಟ.

ಪುರೋಹಿತರು 'ವಾಸು ಆಷಾಡದಲ್ಲಿ ಮಾತ್ರ ಬೇಡ, ಗೃಹಪ್ರವೇಶ ಪುಣ್ಯದ ಕೆಲಸ, ಮುಹೂರ್ತ ನೋಡದೇ ಹೇಗಪ್ಪಾ ಮಾಡುವುದು?' ಎಂದರೆ, 'ಮೊದಲೆರಡು ಬಾರಿ ಮುಹೂರ್ತ ನೋಡಿಯೇ ಇಟ್ಟ ಗೃಹ ಪ್ರವೇಶದಂದು ಗೃಹದ ಪ್ರವೇಶವಾಗದೇ ಇನ್ನೂ ಬಾಡಿಗೆ ಮನೆಯೇ ಗತಿಯಾಗಿದೆ, ಈ ಸಲ ನೋಡಿಯೇ ಬಿಡೋಣ' ಎಂದು ವಾಸು ಒಣ ಹಟ ಹಿಡಿದ. ಆಗ ಮನೆಯವರು, ಪುರೋಹಿತರು ಸುಮ್ಮನಿರಬೇಕಾಯಿತು. ಹೀಗೆ ಹೆಂಡತಿಯೊಂದಿಗೆ ಪೂಜೆಗೆ ಕೂತ ವಾಸುವಿನ ಮನಸ್ಸು ಮಾತ್ರ ಎಲ್ಲೆಲ್ಲೋ ಸುತ್ತುತ್ತಿತ್ತು. ಕೈ ಮಾತ್ರ ಪುರೋಹಿತರು ಹೇಳಿದಂತೆ ಮಾಡುತಿತ್ತು. ಆಗ ವಾಸು ವಾಸ್ತು ಹೋಮಕ್ಕೆ ಆರತಿ ಎತ್ತುತ್ತಿದ್ದಂತೆ ಆಕಸ್ಮಿಕವಾಗಿ ಕೈಯಿಂದ ಆರತಿ ಕೆಳಗೆ ಬಿದ್ದು ಹೆಂಡತಿಯ ಕೆಂಪು ಬಣ್ಣದ ಸೀರೆಯ ಸ್ವಲ್ಪ ಭಾಗ ಸುಟ್ಟು ಕಪ್ಪಗಾಯಿತು 'ಅಯ್ಯಯ್ಯೋ ಗೃಹವೇಶಕ್ಕೆಂದು ತೆಗೆದಕೊಂಡ ನನ್ನ 12,000 ಸಾವಿರ ರೂಪಾಯಿಯ ಸೀರೆಯನ್ನೇ ಸುಟ್ಟು ಹಾಕಿದಿರಲ್ಲ' ಎನ್ನುತ್ತ ಸುಮಂಗಲಾ ಪುರಸೊತ್ತಿಲ್ಲದೆ ಕಣ್ಣೀರನ್ನು ಒರೆಸಿಕೊಳ್ಳತೊಡಗಿದಳು. ವಾಸುವಿನ ಅಮ್ಮನಂತೂ 'ನಾ ಮೊದಲೇ ಹೇಳಿದ್ದೆ ಆಷಾಡದಲ್ಲಿ ಪೂಜೆ ಇಟ್ಟುಕೊಂಡರೆ ಹೀಗೇ ಆಗತ್ತೆ' ಎನ್ನುತ್ತ ತಲೆ ತಲೆ ಚಚ್ಚಿಕೊಂಡರು.

'ಏನೂ ಆಗಲಿಲ್ಲ ಸುಮ್ಮನಿರಿ ಎಲ್ಲಾ' ಎನ್ನುತ್ತ ಪುರೋಹಿತರು ಜೋರು ಮಾಡಿ ಎಲ್ಲರನ್ನೂ ಸುಮ್ಮನಾಗಿಸಿದರು. ಆರತಿ ಅರ್ಧಕ್ಕೆ ನಿಂತರೂ ವಾಸ್ತು ಪೂಜೆಯಂತೂ ಮುಗಿಯಿತು.

ಮರುದಿನ ಸತ್ಯನಾರಾಯಣ ಪೂಜೆ ಮತ್ತು ಗಣಹೋಮ. ಆಷಾಡದಲ್ಲಿ ಪೂಜೆ ಇಟ್ಟುಕೊಂಡದ್ದಕ್ಕೆ ಹಿಂದಿನಿಂದ, ಮುಂದಿನಿಂದ ಆಡಿಕೊಂಡಿದ್ದರೂ ಸ್ನೇಹಿತರು, ಬಂಧು ಬಳಗದವರೆಲ್ಲ ನೆರೆದಿದ್ದರು. ಕೆಲವರಿಗೆ ಮುಂದೇನು ಎಂಬ ಕುತೂಹಲ. ಮತ್ತೆ ಕೆಲವರು ಸಿಹಿ ಊಟ ತಪ್ಪಿಸಿಕೊಳ್ಳಬಾರದೆಂದು ಅಲ್ಲಿಗೆ ಬಂದಿದ್ದರು. ಹೊಸ ಸೀರೆಗೆ ಹೊಲಿಸಿದ ಬ್ಲೌಸಿನ ಫಿಟ್ಟಿಂಗ್ ಸರಿಯಿಲ್ಲದೆ ಮನದಲ್ಲೇ ಬ್ಲೌಸ್ ಹೊಲಿದವನನ್ನು ಶಪಿಸುತ್ತಿದ್ದಳು ಸುಮಂಗಲಾ. ವಾಸುವಿನ ಅಮ್ಮ ಬಂದವರನ್ನು ಮಾತನಾಡಿಸುತ್ತ ಮಧ್ಯೆ ಮಧ್ಯೆ ಸೊಸೆಯನ್ನು ದೂರುತ್ತಿದ್ದದ್ದು ಕೇಳಿ ಬರುತ್ತಿತ್ತು. ಯಾವ ತಲೆಬಿಸಿ ಇಲ್ಲದೆ ಇದ್ದವರೆಂದರೆ ವಾಸುವಿನ ಮಕ್ಕಳು. ವಾಸು ಮನದಲ್ಲಿ ಗಾಬರಿ ಇದ್ದರೂ ತೋರಿಸಿಕೊಳ್ಳದೆ, ಪುರೋಹಿತರು ಹೇಳಿದ್ದನ್ನು ಚಾಚೂ ತಪ್ಪದೆ ಮಾಡುತ್ತ ಅಂತೂ ಇಂತೂ ಗೃಹಪ್ರವೇಶ ಮುಗಿಯುತ್ತ ಬಂತು. ಇನ್ನು ಒಂದು ವಾರದಲ್ಲಿ ಮನೆ ಸಾಮಾನೆಲ್ಲ ಸಾಗಿಸಿದರೆ, ಮುಂದಿನ ತಿಂಗಳಿಂದ ಬಾಡಿಗೆ ಕೊಡಬೇಕಾಗಿಲ್ಲ. ಸಾಲದ ಕಂತು ಕೊಟ್ಟರೆ ಸಾಕು, ಸಾಲದ ಕಂತೆಂದು ಸಂಬಳ ಕಟ್ಟಾದರೂ, ಇವಳ ಸೀರೆ, ಕಿಟ್ಟಿಪಾರ್ಟಿಯ ಹೆಚ್ಚು ಗಲಾಟೆಯಿಲ್ಲದಿದ್ದರೆ ಮುಂದಿನ ವರ್ಷ ಈ ಸಮಯಕ್ಕೆ ಒಂದು ಸೆಕೆಂಡ್ ಹ್ಯಾಂಡ್ ಕಾರನ್ನಾದರೂ ಖರೀದಿಸಬಹುದು ಎನ್ನುವ ಲೆಕ್ಕಾಚಾರ ಹಾಕತೊಡಗಿದ. ಬಂದವರೆಲ್ಲ ಒಬ್ಬೊಬ್ಬರೇ ಉಡುಗೊರೆ ಕೊಡುತ್ತ 'ಅಂತೂ ಇಂತೂ ನೀನೇ ಗೆದ್ದೆ ಮಾರಾಯ, ಇನ್ನೊಂದು ಮಹಡಿ ಕಟ್ಟಿದ್ದರೆ ಬಾಡಿಗೆ ಕೊಡಬಹುದಿತ್ತು. ಮನೆಯೇನೊ ಚೆನ್ನಾಗಿ ಕಟ್ಟಿಸಿದ್ದಿ ಆದರೆ ವಾಸ್ತು?'ಎನ್ನುತ್ತ ಕೈ ಕುಲುಕುತ್ತಿದ್ದರು.

ವಾಸು 'ಅಯ್ಯಬ್ಬ ನಾನೇ ಗೆದ್ದೆ' ಎಂದುಕೊಂಡನೋ ಬಿಟ್ಟನೋ ಅಷ್ಟರಲ್ಲೇ ಹೊರಗಡೆ 'ಡಬ್' ಎನ್ನುವ ಶಬ್ದ ಕೇಳಿಸಿತು. ಅದರೊಂದಿಗೆ ಜನರು ಅಯ್ಯಯ್ಯೋ ಎನ್ನುವ ಜನರ ಕಿರುಚಾಟವೂ ಕೇಳಿ ಬಂತು. ಮನೆ ಒಳಗಿದ್ದವರೆಲ್ಲ ಹೊರಗೋಡಿ ಬಂದಾಗ ಕಂಡದ್ದೇನು? ಗಾಳಿಗೆ ಟಾರ್ಪಲ್ ಒಂದು ಬದಿ ಕುಸಿದು ಬಡಿಸಲೆಂದು ಸಾಲಾಗಿ ಇಟ್ಟುಕೊಂಡಿದ್ದ ಅಡುಗೆಯ ಮೇಲೆ ಬಿದ್ದು ಅಡುಗೆಯೆಲ್ಲ ನೆಲಕ್ಕುರುಳಿತು. ಶುರುವಾಯಿತು ಜನರ ಬಿಟ್ಟಿ ಕಮೆಂಟ್ರಿ, 'ನಾ ಮೊದಲೇ ಹೇಳಿದ್ದೆ. ಮನೆಯ ವಾಸ್ತುವೇ ಸರಿ ಇಲ್ಲ, ಕಡಿಮೆ ಹಣಕ್ಕೆ ಸಿಕ್ಕಿತೆಂದು ದಕ್ಷಿಣಾಭಿಮುಖದ ಸೈಟನ್ನು ತೆಗೆದುಕೊಂಡ, ಸೈಟು ದಕ್ಷಿಣಾಭಿಮುಖವಾಗಿದ್ದರೂ, ಪರಿಹಾರವಾಗಿ ಮನೆಗೆ ಹಲವು ಬದಲಾವಣೆ ಮಾಡಲು ಹೇಳಿದ್ದೆ. ಆದರೆ ನನ್ನ ಮಾತನ್ನು ಕೇಳಲಿಲ್ಲ ಇವನು, ಅದೂ ಗೃಹ ಪ್ರವೇಶಕ್ಕೆ ಮುಹೂರ್ತ ಆಷಾಡದಲ್ಲೇ ಸಿಕ್ಕಬೇಕೇ, ಮನೆಯಲ್ಲಿನ್ನೂ ಇರಲು ಶುರು ಮಾಡಿಲ್ಲ, ಮನೆಯಲ್ಲಿ ವಾಸಿಸಲು ಶುರು ಮಾಡಿದಾಗ ಇನ್ನಾವ ತೊಂದರೆಯೋ?'

ಇದನ್ನೆಲ್ಲ ನೋಡಿ, ಕೇಳುತ್ತಿದ್ದಂತೆ ವಾಸು ತಲೆ ತಿರುಗಿ ಬಿದ್ದ, ಯಾರೋ ಹಿಂದಿನಿಂದ ಹಿಡಿದುಕೊಂಡಿದ್ದರಿಂದ ತಲೆ ಏಟಾಗುವುದು ತಪ್ಪಿತು. ವಾಸುವಿನ ಅಮ್ಮನಿಗೆ ಎಚ್ಚರ ತಪ್ಪಿತು, ಮತ್ಯಾರೋ ಮುಖಕ್ಕೆ ನೀರು ಚಿಮುಕಿಸುತ್ತಿದ್ದದ್ದು ಕಾಣಿಸಿತು. ಸುಮಂಗಲಾ ಮೂಲೆ ಹಿಡಿದು ಅಳತೊಡಗಿದರೆ, ಬಂಧುಗಳೆಲ್ಲ ಅವಳನ್ನು ಸುತ್ತುವರೆದು 'ಅಳಬೇಡ ಕಣೇ, ಅವತ್ತೇ ನಾ ಹೇಳಿದ ಕೆಂಗುಂಟೆ ಪುರೋಹಿತರ ಹತ್ತಿರ ವಾಸ್ತು ಹೋಮ, ಪೂಜೆ ಮಾಡಿಸಿದ್ದರೆ ಹೀಗಾಗುತ್ತಿರಲಿಲ್ಲ, ಬೊಮ್ಮನಹಳ್ಳಿಯಲ್ಲೊಬ್ಬರು ಮಂತ್ರವಾದಿ ಇದ್ದಾರೆ, ಮುಂದಿನ ವಾರ ಜಾತಕ ತೋರಿಸೋಣ, ಎಲ್ಲದಕ್ಕೂ ಏನಾದರೂ ಪರಿಹಾರ ಇದ್ದೇ ಇರುತ್ತದೆ, ಸ್ವಲ್ಪ ಖರ್ಚಾಗುತ್ತದಷ್ಟೇ' ಎನ್ನುತ್ತಾ ಸಮಾಧಾನಪಡಿಸತೊಡಗಿದರು.

****

ತನ್ನ ಹೆಸರಲ್ಲಿ ಒಂದು ಸೈಟು, ಸ್ವಂತ ಮನೆ ಕಟ್ಟಲು ಒಂದು ಖಾಸಗಿ ಕಂಪೆನಿಯಲ್ಲಿ ಲೆಕ್ಕಾಚಾರ ವಿಭಾಗದಲ್ಲಿ ಉದ್ಯೋಗದಲ್ಲಿದ್ದ ವಾಸು ಪಟ್ಟ ಪಾಡುಗಳೆಷ್ಟು? ಹೇಳ ಹೊರಟರೆ ಒಂದು 400 ಪುಟದ ಕಾದಂಬರಿಯೇ ಬರೆಯಬಹುದೇನೋ?

ವಾಸುವಿನ ಪೂರ್ಣ ಹೆಸರು ವಾಸುದೇವ ಶ್ಯಾನುಭೋಗ. ಓದು ಮುಗಿಯುತ್ತಿದ್ದಂತೆ ಒಂದು ಖಾಸಗಿ ಕಂಪೆನಿಯಲ್ಲಿ ಕೆಲಸ, ಕೆಲಸ ಸಿಕ್ಕ ಹೊಸತರಲ್ಲಿ ಸಿಕ್ಕ ಸಂಬಳವು ಕೈತುಂಬಿದಂತೆ ಕಂಡು ಬಂದು ಕೈಗೆ ಸಿಕ್ಕಿದ್ದನ್ನೆಲ್ಲ ಕೊಂಡು ಕೊಂಡಿದ್ದೇ ಕೊಂಡಿದ್ದು. ಮದುವೆಯಾಗಿ ಸಹಧರ್ಮಿಣಿ